SEVA BHARATHI
सेवा ही परमो धर्मः

ಮಾರ್ಚ್ - 2026
ಸಂಚಿಕೆ - 03
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216



## ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ 6 ಕೇಂದ್ರಗಳ ಮೂಲಕ 32 ಗಾಲಿಕುರ್ಚಿಗಳ ವಿತರಣೆ

## ನೆರಿಯದಲ್ಲಿ 36 ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ ಉದ್ಘಾಟನೆ

## LIC ಗೋಲ್ಡನ್ ಜುಬಿಲಿ ಫೌಂಡೇಷನ್ ನಿಂದ ಸೇವಾಧಾಮ ನೂತನ ಕಟ್ಟಡಕ್ಕೆ ರೂ. 40 ಲಕ್ಷ ದೇಣಿಗೆ

LIC
भारतीय जीवन बीमा निगम
LIFE INSURANCE CORPORATION OF INDIA

## ಬೆಳ್ತಂಗಡಿ ಶಾಸಕರಾದ ಶ್ರೀ ಹರೀಶ್ ಪೂಂಜ ರವರಿಂದ ಸೇವಾಧಾಮ ನೂತನ ಕಟ್ಟಡಕ್ಕೆ ರೂ. 10 ಲಕ್ಷ ಅನುದಾನ ಮಂಜೂರು

## ಅಪಘಾತದಿಂದ ಆತ್ಮವಿಶ್ವಾಸದ ಕಡೆಗೆ:

## ಬೆನ್ನುಹುರಿ ಅಪಘಾತಕ್ಕೊಳಗಾದ ಸಂಪತ್ ಅವರ ಯಶೋಗಾಥೆ

ಯಶೋಗಾಥೆ

## ನಮ್ಮಿಂದಿಷ್ಟು

**ಆತ್ಮೀಯರಿಗೆಲ್ಲ ನಮಸ್ಕಾರಗಳು,**

ಸೇವೆಗಳ ತುಡಿತಗಳೇ ಒಂದೊಂದು ಹೊಸ ಮಜಲಿಗೆ ಧುಮುಕುವಂತಾಯ್ತು ಕಟ್ಟಡ ನಿರ್ಮಾಣ ಕಾರ್ಯದ ನಿರ್ಧಾರವೂ ಕೂಡಾ ಒಂದು ಕಠಿಣ ನಿರ್ಧಾರವಾಗಿತ್ತು. ಆದರೆ ಅದಕ್ಕಾಗಿ ಪಟ್ಟ ಪರಿಶ್ರಮದ ಫಲವೇ ಇಂದು ನೂತನ ಕಾರ್ಯಾಲಯದ ಮೂಲಕ ಇನ್ನಷ್ಟು ಸೇವಾಕಾರ್ಯಗಳಿಗೆ ಧುಮುಕುವಂತಾಗಿತ್ತು. ಮಂಗಳೂರಿನ MRPL ನ CSR ನಿಧಿಯ 42 ಲಕ್ಷ ರೂಪಾಯಿ ಮಂಜೂರು ನಮ್ಮ ಕಠಿಣ ನಿರ್ಧಾರಕ್ಕೆ ಸಂದಿದ ಫಲಶೃತಿಯಾಯಿತು.

ನಂತರ ಒಂದಾದರ ಒಂದರಂತೆ ಮೊದಲಮಹಡಿಗೆ ಮಂಗಳೂರಿನ NMPA ಯ CSR ನಿಧಿ 25 ಲಕ್ಷ ರೂ. ಬಂದಿರುವುದು ಆಕ್ಸಿಜನ್ ಸಿಕ್ಕಿದಂತಾಯ್ತು ಅದಕ್ಕೆ ಪೂರಕವಾಗಿ LIC ಯ CSR ನಿಧಿ 40 ಲಕ್ಷ ರೂಪಾಯಿಗಳು ಈ ವಾರ ಮಂಜೂರಾಗಿದ್ದು ಸಂತೋಷಕ್ಕೆ ಪಾರವೇ ಇಲ್ಲದಾಗಿದೆ ಏಕೆಂದರೆ ಮೊದಲ ಮಹಡಿ ಪೂರ್ಣಗೊಳ್ಳಲು ಅತಿ ಅವಶ್ಯಕವಾಗಿತ್ತು ಅಷ್ಟು ಮೊತ್ತದ ಹಣ.

ಎರಡನೇ ಮಹಡಿಗೆ ಈಗಾಗಲೇ ದಾನಿಗಳು ದೊರೆತಿರುವುದನ್ನು ಈ ಮೊದಲೇ ತಮ್ಮೆಲ್ಲರಿಗೂ ತಿಳಿಸಲಾಗಿತ್ತು. ಈ ಮಧ್ಯೆ LSG SKY CHEFS (INDIA) private Limited ಮತ್ತು Magnus Lubricants pvt Ltd ನವರ ದೊಡ್ಡ ಮೊತ್ತವೂ ದೊರೆತಿರುವುದು ಉಲ್ಲೇಖನೀಯ ಸಂಗತಿಯಾಗಿದೆ.

ಬೆಂಗಳೂರಿನ APD ಸಂಸ್ಥೆಯ ಸಹಕಾರದಲ್ಲಿ ದ್ವಿತೀಯ ಹಂತದಲ್ಲಿ 32 ಗಾಲಿಕುರ್ಚಿಗಳನ್ನು 6 ಕೇಂದ್ರಗಳ ಮೂಲಕ ಅರ್ಹ ಫಲಾನುಭವಿಗಳಿಗೆ ವಿತರಿಸಲಾಯಿತು. ಈ ವರ್ಷ 100 ಗಾಲಿಕುರ್ಚಿಗಳನ್ನು ವಿತರಣೆ ಮಾಡುವ ಸಂಕಲ್ಪದಂತೆ ಮೊದಲ ಹಂತದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು. ಉಳಿದಂತೆ ಮುಂದಿನ ಹಂತಕ್ಕಾಗಿ ಅರ್ಹ ಫಲಾನುಭವಿಗಳ ಆಯ್ಕೆ ನಡೆಯುತ್ತದೆ.

ಬೈಂದೂರಿನ ಹೇನಬೇರುವಿನಲ್ಲಿ 5 ಬೆಡ್ ಗಳು ಭರ್ತಿಯಾಗಿದ್ದು ಕಾಯುವಿಕೆ ನಡೆದಿದೆ. ಅಂದರೆ ಅದರ ಅಗತ್ಯತೆ ಮತ್ತು ಅನಿವಾರ್ಯತೆಗಳು ಬಹಳಷ್ಟಿವೆ ಎಂದರ್ಥವಾಗುತ್ತದೆ.

ಇನ್ನುಳಿದಂತೆ ತೋಟತ್ತಾಡಿ ಬಯಲು ಎಂಬಲ್ಲಿ ಶ್ರೀಮತಿ ದಿವ್ಯಾ ಮತ್ತು ಟೈಲರ್ ಶ್ರೀಮತಿ ಸಜಿತಾ ರವರ ಪ್ರಯತ್ನದಲ್ಲಿ 36ನೇ ಉಚಿತ ಟೈಲರಿಂಗ್ ಶಿಬಿರ ಪ್ರಾರಂಭಗೊಂಡಿದೆ. ಮುಂಡಾಜೆ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಇವರ ಸಹಕಾರವು ಈ ಶಿಬಿರಕ್ಕಿದೆ. ಒಟ್ಟಿನಲ್ಲಿ ಮಹಿಳೆಯರು ಕೂಡ ಆರ್ಥಿಕ ಸ್ವಾವಲಂಬನೆಗೊಳ್ಳಬೇಕೆಂಬ ಸದುದ್ದೇಶ ಸಬಲಿನಿ ಯೋಜನೆಯದ್ದು.

ಒಟ್ಟಿನಲ್ಲಿ ಸೇವಾ ಕಾರ್ಯ ನಿರಂತರ




**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**

**ಕೆ. ವಿನಾಯಕ ರಾವ್**

## ಫೆಬ್ರವರಿ ತಿಂಗಳ ಸೇವಾಪಥ ಬಿಡುಗಡೆ



**ಫೆಬ್ರವರಿ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ ಸೇವಾಪಥವನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಕೆನರಾ ಬ್ಯಾಂಕ್ ನ ಸೀನಿಯರ್ ಮ್ಯಾನೇಜರ್ ಶ್ರೀ ಜಿ ರಾಘವೇಂದ್ರ ತೇಜಾ ರವರು ಬಿಡುಗಡೆಗೊಳಿಸಿರುತ್ತಾರೆ.**

### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು**
**574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ)**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ**
**574 198 : 94482 54888**

**ಸೇವಾಧಾಮ ಬೈಂದೂರು**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಪೋಸ್ಟ್, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214**

### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ
ಶ್ರೀ ಸುಮಂತ್ ಕುಮಾರ್ ಜೈನ್
ಶ್ರೀ ಮಂಜುನಾಥ್ ಕನ್ಯಾಡಿ

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರಾವ್ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಳ್ಮ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

## ಸೌತಡ್ಕ ಸೇವಾಧಾಮದಲ್ಲಿ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮ ಉದ್ಘಾಟನೆ




**ಸೌತಡ್ಕ(ಮಾ.15):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು. ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಉಡುಪಿಯ ಶ್ರೀ ನಿಹಾಲ್ ವಿಲ್ಸನ್, ಕಾರ್ಕಳದ ಶ್ರೀ ಸಂದೀಶ್, ಆತ್ರಾಡಿಯ ಶ್ರೀ ರಮೇಶ್ ನಾಯ್ಕ್ ರವರಿಗೆ ಗಾಲಿಕುರ್ಚಿ ವಿತರಣಾ ಕಾರ್ಯಕ್ರಮವನ್ನು ಮಾರ್ಚ್ 15 ರಂದು ಸೌತಡ್ಕ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ನಡೆಸಲಾಯಿತು.

ನಿವೃತ್ತ ಮಹಿಳಾ ಆರೋಗ್ಯ ಸಂದರ್ಶಕರು ಹಾಗೂ ಸೇವಾಭಾರತಿ POSH ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ವಸಂತಿ ಗೌಡರವರು ಕಾರ್ಯಕ್ರಮವನ್ನು ಉದ್ಘಾಟಿಸಿ ದಿವ್ಯಾಂಗರಿಗೆ ಶುಭಹಾರೈಸಿ ವಿಶ್ವಾಸ ಬದುಕಿಗಾಗಿ ಧೈರ್ಯ ತುಂಬಿದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಪುತ್ತೂರು ಜಿಲ್ಲಾ ಸಹ ಪ್ರಚಾರ ಪ್ರಮುಖ ಶ್ರೀ ಗಣೇಶ್ ಕೊಕ್ಕಡ, ಕೊಕ್ಕಡದ ಶ್ರೀಮತಿ ಮಾಳವಿಕ, ಸೇವಾಭಾರತಿ ಅಧ್ಯಕ್ಷರಾದ ಶ್ರೀ ವಿನಾಯಕ ರಾವ್, ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ ಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾಭಾರತಿಯಿಂದ ಶಿರಸಿಯಲ್ಲಿ 3 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ :




**ಶಿರಸಿ (ಮಾ.15):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಅಂಕೋಲಾದ ಶ್ರೀ ದಿಗಂಬರ್ ನಾಯ್ಕ್, ಸಿದ್ದಾಪುರದ ಶ್ರೀ ಕುಸುಮಾಕರ್ ನಾಯ್ಕ್, ಯಲ್ಲಾಪುರದ ಶ್ರೀ ಮಧುಕೇಶ್ವರ ನಾಯ್ಕ್ ರವರಿಗೆ ಯಲಹಂಕ ಸಮೃದ್ಧಿ ಕ್ರೆಡಿಟ್ ಕೋಪರೇಟಿವ್ ಸೊಸೈಟಿಯ ಉಪಾಧ್ಯಕ್ಷರಾದ ಶ್ರೀ ನಾರಾಯಣ ರಾಮಕೃಷ್ಣ ಕೋಮಾರ್, ಶಿರಸಿ ಮಹಾಲಕ್ಷ್ಮಿ ಮೆಮೋರಿಯಲ್ ಆಸ್ಪತ್ರೆಯ ಮೆಡಿಕಲ್ ಡೈರೆಕ್ಟರ್ ಹಾಗೂ ಶಿರಸಿ ಸ್ಕ್ಯಾನ್ ಡೈಗ್ನೋಸ್ಟಿಕ್ ಮತ್ತು ರಿಸರ್ಚ್ ಸೆಂಟರ್ ನ ಡೈರೆಕ್ಟರ್ ಡಾ. ದಿನೇಶ್ ಹೆಗ್ಡೆ, ಶಿವಂ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸಕರು ಡಾ. ಮಧುಕೇಶ್ವರ ಹೆಗ್ಡೆಯವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿ ಶುಭಹಾರೈಸಿದರು.

## ಕನ್ಯಾಡಿ ಸೇವಾಭಾರತಿಯಿಂದ ಉಡುಪಿಯಲ್ಲಿ 4 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ




**ಉಡುಪಿ (ಮಾ.15):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಮುಂಡ್ಕೂರಿನ ಶ್ರೀ ಶಶಿಧರ್, ಚಾರದ ಶ್ರೀ ಸಂತೋಷ್ ನಾಯ್ಕ್, ನಂದಿಕೂರಿನ ಶ್ರೀ ವಿದ್ಯಾನಾಥ್ ಶೆಟ್ಟಿ, ಹಜಮಾಡಿಯ ಶ್ರೀ ಜಗದೀಶ್ ರವರಿಗೆ ಉಡುಪಿ ಕಡಿಯಾಳಿ ಶ್ರೀ ಮಹಿಷಮರ್ಧಿನಿ ದೇವಸ್ಥಾನದ ಆಡಳಿತ ಮೊಕ್ತೇಸರರು ಶ್ರೀ ಕೆ ವಿಜಯರಾಘವ ರಾವ್, ಭಾರತ್ ವಿಕಾಸ ಪರಿಷತ್ ನ ದಕ್ಷಿಣ ಪ್ರಾಂತ ಸಂಯೋಜಕರಾದ ಶ್ರೀ ಹರಿರಾಮ್ ಶೆಣೈ, ಭಾರತ್ ವಿಕಾಸ ಪರಿಷತ್ ಭಾರ್ಗವ ಶಾಖೆಯ ಕಾರ್ಯದರ್ಶಿ ಶ್ರೀ ಸುಬ್ರಾಯ ಶೆಣೈ, ಸೇವಾಭಾರತಿಯ ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಹಾಗೂ ಉಡುಪಿ URW ಶ್ರೀ ಸರ್ವೋತ್ತಮ್ ಅಮೀನ್ ರವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿ ಶುಭಹಾರೈಸಿದರು.

## ಕನ್ಯಾಡಿ ಸೇವಾಭಾರತಿಯಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ರಾಣೆಬೆನ್ನೂರಿನ ಕು. ಚೈತ್ರಾ ರವರಿಗೆ ಗಾಲಿಕುರ್ಚಿ ವಿತರಣೆ



**ಸೌತಡ್ಕ(ಮಾ.12):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಅರ್ಹ ಫಲಾನುಭವಿ ರಾಣೆಬೆನ್ನೂರಿನ ಕು. ಚೈತ್ರಾ ರವರಿಗೆ ಸೌತಡ್ಕ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ಸಂಸ್ಥೆಯ ಹಿತೈಷಿ ಮತ್ತು ದಾನಿಗಳಾದ ಕೊಕ್ಕಡದ ಶ್ರೀ ಗಣೇಶ್ ಪಿ. ಐತಾಳ್ ರವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಶ್ರೀಯುತರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟದ ದೇಣಿಗೆಯನ್ನು ನೀಡಿ ಸಹಕರಿಸಿದರು. ಸೇವಾಭಾರತಿಯ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಕನ್ಯಾಡಿ ಸೇವಾಭಾರತಿಯಿಂದ ಬೈಂದೂರು ಸೇವಾಧಾಮದಲ್ಲಿ 5 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ




**ಬೈಂದೂರು (ಮಾ.15):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಬೈಂದೂರಿನ ಶ್ರೀ ಚಂದ್ರಶೇಖರ್ ಶೆಟ್ಟಿ, ಶ್ರೀ ಶಾಜಿ ಜಡ್ಕಲ್, ಕುಂದಾಪುರದ ಗಿರೀಶ್ ಶೆಟ್ಟಿ, ಬೆಳ್ತಂಗಡಿಯ ಶ್ರೀ ಬಾಲಚಂದ್ರ, ಕುಂದಾಪುರದ ಶ್ರೀ ನಿತೀಶ್ ನಾಯ್ಕ್ ರವರಿಗೆ ಬೈಂದೂರು ಮಾನ್ಯ ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ, ಶ್ರೀ ಪಾಂಡುರಂಗ ಪಡಿಯಾರ್ , ಡಾ. ಕೆ. ಪಿ ನಂಬಿಯಾರ್ , ಶ್ರೀ ಗೋಪಾಲ್ ವಸ್ರೆ ಹಾಗೂ ಶ್ರೀ ಸುರೇಶ್ ಬಟ್ವಾಡಿ ಯವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿ ಶುಭಹಾರೈಸಿದರು.

## ಕನ್ಯಾಡಿ ಸೇವಾಭಾರತಿಯಿಂದ ಮಡಿಕೇರಿಯ ಅಶ್ವಿನಿ ಆಸ್ಪತ್ರೆಯಲ್ಲಿ 5 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ




**ಮಡಿಕೇರಿ (ಮಾ.18):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಕೊಡ್ಲಿಪೇಟೆಯ ಶ್ರೀ ಚಂದ್ರೇಗೌಡ ಕೆ.ಜಿ, ಶ್ರೀ ದಯಾನಂದ, ಅಮ್ಮತ್ತಿಯ ಶ್ರೀಮತಿ ಉಷಾ ಪಿ, ಜಾಂಬೂರಿನ ಶ್ರೀ ಹಮೀದ್ ಬಿ ಎ, ಕೊಡಗಿನ ಶ್ರೀ ನಂದನ್ ಕುಮಾರ್, ರವರಿಗೆ ಮಡಿಕೇರಿ ಲಯನ್ಸ್ ಕ್ಲಬ್ ನ ಅಧ್ಯಕ್ಷರಾದ ಲ| ಮದನ್ ಮಾದಯ್ಯ, ಕಾರ್ಯದರ್ಶಿ ಲ| ಮಧುಕರ್ ಕೆ, ಹಾಗೂ ಸದಸ್ಯರಾದ ಲ| ನವೀನ್ ರವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿ ಶುಭಹಾರೈಸಿದರು.

ಸೇವಾಭಾರತಿ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ, ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾಭಾರತಿಯಿಂದ ಮಂಗಳೂರಿನಲ್ಲಿ 5 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಗಾಲಿಕುರ್ಚಿ ವಿತರಣೆ











**ಮಂಗಳೂರು (ಮಾ.19):** ಬೆಂಗಳೂರು APD ಸಂಸ್ಥೆಯ ಸಹಕಾರದೊಂದಿಗೆ ಪ್ರಸ್ತುತ ವರ್ಷದಲ್ಲಿ 100 ಗಾಲಿಕುರ್ಚಿಯನ್ನು ನೀಡುವ ಯೋಜನೆಯನ್ನು ಹೊಂದಿದ್ದು. ಅದರಂತೆ, ಕಳೆದ ಸೆಪ್ಟೆಂಬರ್ ತಿಂಗಳಲ್ಲಿ ಸೇವಾಧಾಮವು 8ನೇ ವರ್ಷಕ್ಕೆ ಪಾದಾರ್ಪಣೆ ಮಾಡಿದ ಸಂದರ್ಭದಲ್ಲಿ 30 ಗಾಲಿಕುರ್ಚಿಗಳನ್ನು ವಿತರಿಸಲಾಗಿತ್ತು.

ಈ ತಿಂಗಳಲ್ಲಿ 32 ಗಾಲಿಕುರ್ಚಿಗಳನ್ನು ವಿತರಿಸುವುದಾಗಿ ನಿರ್ಧರಿಸಿದ್ದು ಗುರುಂಪೆಯ ಶ್ರೀ ಪ್ರಭಾಕರ ಆಚಾರ್ಯ, ಮೂಡಬಿದ್ರೆಯ ಶ್ರೀ ವೆಂಕಟರಮಣ ಭಟ್, ಸಜಿಪದ ಶ್ರೀ ದಿನೇಶ್ ಪೂಜಾರಿ, ನೀರ್ ಮಾರ್ಗದ ಶ್ರೀ ಸ್ಟೀಫನ್, ಪಂಜದ ಶ್ರೀ ಅವಿನ್ ಕುಮಾರ್ ರವರಿಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಮಾನ್ಯ ಕ್ಷೇತ್ರೀಯ ಸಂಘಚಾಲಕರಾದ ಡಾ. ಪಿ ವಾಮನ್ ಶೆಣೈ, ಸೇವಾಭಾರತಿ ದಕ್ಷಿಣ ಕರ್ನಾಟಕ ಪ್ರಾಂತ ಕಾರ್ಯದರ್ಶಿ ಶ್ರೀ ಕೆ ಚನ್ನಯ್ಯ ಸ್ವಾಮಿ ರವರು ಗಾಲಿಕುರ್ಚಿಯನ್ನು ಹಸ್ತಾಂತರಿಸಿ ಶುಭಹಾರೈಸಿದರು.

## ನೆರಿಯದಲ್ಲಿ 36 ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರ ಉದ್ಘಾಟನೆ



**ನೆರಿಯ (ಮಾ. 10):** ಸೇವಾಭಾರತಿ (ರಿ.), ಕನ್ಯಾಡಿ ಇದರ ಆಶ್ರಯದಲ್ಲಿ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ಶ್ರೀ ದುರ್ಗಾ ಮಾತೃ ಮಂಡಳಿ, ಕನ್ಯಾಡಿ ಇದರ ಸಹಕಾರದಲ್ಲಿ ಸಬಲಿನಿ ಯೋಜನೆಯಡಿ ಮಹಿಳೆಯರಿಗಾಗಿ 36ನೇ ಉಚಿತ ಟೈಲರಿಂಗ್ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭವು ಮಾರ್ಚ್ 10 ರಂದು ನೆರಿಯದ ಬಯಲು ಬಸದಿಯ ಹತ್ತಿರ ಶ್ರೀಮತಿ ಶಿಲ್ಲಿಯವರ ಕಾಂಪ್ಲೆಕ್ಸ್ ನಲ್ಲಿ ನಡೆಯಿತು.

ಶಿಬಿರದ ಉದ್ಘಾಟನಾ ಸಮಾರಂಭದಲ್ಲಿ ಮುಂಡಾಜೆ ಪ್ರಾ.ಕೃ.ಪ.ಸ.ಸಂಘ(ನಿ.), ಅಧ್ಯಕ್ಷರಾದ ಶ್ರೀ ಪ್ರಕಾಶ್ ನಾರಾಯಣ ರವರು ಶಿಬಿರಕ್ಕೆ ಚಾಲನೆ ನೀಡಿ, ಭಾಗವಹಿಸಿದ ಮಹಿಳೆಯರಿಗೆ ಶುಭಹಾರೈಸಿದರು. ಈ ತರಬೇತಿ ಶಿಬಿರವು ಸ್ವ-ಉದ್ಯೋಗದ ಕಡೆಗೆ ಮಹತ್ವದ ಹೆಜ್ಜೆಯಾಗಿದೆ ಎಂದರು.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ವಿನಾಯಕ ರಾವ್ ರವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಟೈಲರಿಂಗ್ ಕಲಿಕೆ ಅನೇಕ ಉದ್ಯೋಗದ ಅವಕಾಶಗಳನ್ನು ಒದಗಿಸಬಲ್ಲದು. ನೀವು ಈ ವಿದ್ಯೆಯನ್ನು ಕಲಿತು ಸಮಾಜದಲ್ಲಿ ಬೆಳಗಬೇಕು ಎಂದು ಅಧ್ಯಕ್ಷರ ನುಡಿಗಳನ್ನಾಡಿ ಶುಭಹಾರೈಸಿದರು.

ನೆರಿಯ ವಿಶ್ವ ಹಿಂದೂ ಪರಿಷತ್ ಅಧ್ಯಕ್ಷರಾದ ಶ್ರೀ ಮಹೇಶ್, ಪುತ್ತೂರು ಜಿಲ್ಲಾ ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿ ಶ್ರೀ ನವೀನ್ ನೆರಿಯ, ಕನ್ಯಾಡಿ ಶ್ರೀ ದುರ್ಗಾಮಾತೃ ಮಂಡಳಿ ಅಧ್ಯಕ್ಷರಾದ ಶ್ರೀಮತಿ ಮಮತಾ ಬಿ, ಬಯಲು ಬಸದಿ ನೂತನ ವಾಣಿಜ್ಯ ಸಂಕೀರ್ಣ ಮಾಲಕರಾದ ಶ್ರೀಮತಿ ಶಿಲ್ಲಿ, ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ದಿವ್ಯಾ, ಟೈಲರಿಂಗ್ ತರಬೇತುದಾರರಾದ ಶ್ರೀಮತಿ ಸಜಿತಾ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಶಿಬಿರದಲ್ಲಿ ಒಟ್ಟು 22 ಮಂದಿ ಮಹಿಳಾ ಶಿಬಿರಾರ್ಥಿಗಳು ಭಾಗವಹಿಸಿದ್ದರು. ಅಂಗನವಾಡಿ ಕಾರ್ಯಕರ್ತೆ ಶ್ರೀಮತಿ ದಿವ್ಯಾ ನಿರೂಪಿಸಿ, ಟೈಲರಿಂಗ್ ತರಬೇತಿಯ ಶಿಬಿರಾರ್ಥಿ ಕು ಅರ್ಪಿತಾ ಸ್ವಾಗತಿಸಿ ಧನ್ಯವಾದವಿತ್ತರು

## ಸೇವಾಧಾಮದ ಫಲಾನುಭವಿಯ ಮನೆಗೆ ಸೇವಾಭಾರತಿಯ ಅಧ್ಯಕ್ಷರ ಭೇಟಿ



**ಚಿಕ್ಕಮಗಳೂರು (ಮಾ. 14)**: ಸೌತಡ್ಕ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡ ಫಲಾನುಭವಿ ಚಿಕ್ಕಮಗಳೂರಿನ ಶ್ರೀ ನಂದನ್ ಎಚ್ ಬಿ ರವರ ಮನೆಗೆ ಸೇವಾಭಾರತಿಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ಮಾರ್ಚ್ 14 ರಂದು ಭೇಟಿ ನೀಡಿ, ನಂದನ್ ಅವರ ಆರೋಗ್ಯ ಹಾಗೂ ಯೋಗಕ್ಷೇಮವನ್ನು ವಿಚಾರಿಸಿ, ಅವರೊಂದಿಗೆ ಆತ್ಮೀಯವಾಗಿ ಮಾತುಕತೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಶ್ರೀ ನಂದನ್ ಎಚ್ ಬಿ ರವರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ತರಕಾರಿಗಳನ್ನು ಸಹಕರಿಸಿದ್ದಾರೆ. ಈ ಸಹಕಾರವನ್ನು ಸಂಸ್ಥೆಯ ಪರವಾಗಿ ಅಧ್ಯಕ್ಷರು ಸ್ವೀಕರಿಸಿ, ಅವರಿಗೆ ಹಾಗೂ ಅವರ ಕುಟುಂಬದವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸಲಾಯಿತು.

# ಪುಣೆಯ ಮ್ಯಾಗ್ನಸ್ ಲೂಬ್ರಿಕೇಂಟ್ ಪ್ರೈವೇಟ್ ಲಿಮಿಟೆಡ್ ನಿಂದ ರೂ. 9,06,220/- ದೇಣಿಗೆ

ಪುಣೆಯ ಮ್ಯಾಗ್ನಸ್ ಲೂಬ್ರಿಕೇಂಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಕಾರ್ಯಚಟುವಟಿಕೆಗಳ ಮೂಲಕ ಸಮಾಜದ ಸಮಗ್ರ ಅಭಿವೃದ್ಧಿಗೆ ಶ್ರೇಷ್ಠ ಕೊಡುಗೆ ನೀಡುತ್ತಿರುವುದು ಅತ್ಯಂತ ಶ್ಲಾಘನೀಯವಾಗಿದೆ. ಸಮಾಜದ ಅಗತ್ಯಗಳನ್ನು ಮನಗಂಡು, ಸೇವಾಮನೋಭಾವದಿಂದ ಕಾರ್ಯನಿರ್ವಹಿಸುತ್ತಿರುವ ಈ ಕಂಪನಿಯ ಸಮಾಜಮುಖಿ ದೃಷ್ಟಿಕೋನ ಮತ್ತು ಬದ್ಧತೆ ಇತರ ಕಂಪನಿಗಳಿಗೆ ಮಾದರಿಯಾಗಿದೆ.

ಈ ಕಂಪನಿಯು CSR ಯೋಜನೆಯಡಿ ಕನ್ಯಾಡಿಯಲ್ಲಿ ಬೆನ್ನುಹುರಿ ಗಾಯಗೊಂಡ ದಿವ್ಯಾಂಗರಿಗಾಗಿ ನಿರ್ಮಾಣಗೊಳ್ಳುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣ ಕಾರ್ಯಕ್ಕೆ ರೂ. 9,06,220/- ದೇಣಿಗೆಯನ್ನು ನೀಡಿ ಮಹತ್ವದ ಸಹಕಾರ ನೀಡಿದೆ. ಈ ದೇಣಿಗೆಯು ಕೇಂದ್ರದ ನಿರ್ಮಾಣ ಕಾರ್ಯವನ್ನು ವೇಗಗೊಳಿಸುವುದಲ್ಲದೆ, ಭವಿಷ್ಯದಲ್ಲಿ ಅನೇಕ ದಿವ್ಯಾಂಗರಿಗೆ ಸಮಗ್ರ ಪುನಶ್ಚೇತನ ಸೇವೆಗಳನ್ನು ಒದಗಿಸಲು ಬಲವಾದ ಆಧಾರವಾಗಲಿದೆ.

ಮ್ಯಾಗ್ನಸ್ ಲೂಬ್ರಿಕೇಂಟ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಕಳೆದ ಮೂರು ವರ್ಷಗಳಿಂದ ನಿರಂತರವಾಗಿ CSR ನಿಧಿಗಳ ಮೂಲಕ ನಮ್ಮ ಸಂಸ್ಥೆಗೆ ಅಮೂಲ್ಯ ಬೆಂಬಲ ನೀಡುತ್ತಿದ್ದು, ನಮ್ಮ ಸೇವಾ ಚಟುವಟಿಕೆಗಳನ್ನು ವಿಸ್ತರಿಸಲು ಪ್ರಮುಖ ಪಾತ್ರವಹಿಸಿದೆ. ಅವರ ನಿರಂತರ ಪ್ರೋತ್ಸಾಹ ಮತ್ತು ವಿಶ್ವಾಸ ನಮ್ಮ ಕಾರ್ಯಕ್ಕೆ ಹೆಚ್ಚಿನ ಪ್ರೇರಣೆಯನ್ನು ನೀಡುತ್ತದೆ.

ಈ ಮಹತ್ವದ ಸಹಕಾರಕ್ಕಾಗಿ ಮ್ಯಾಗ್ನಸ್ ಲೂಬ್ರಿಕೇಂಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯ ಆಡಳಿತ ಮಂಡಳಿ ಮತ್ತು ತಂಡದ ಎಲ್ಲ ಸದಸ್ಯರಿಗೆ ನಮ್ಮ ಸಂಸ್ಥೆಯ ವತಿಯಿಂದ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

# ಬೆಂಗಳೂರಿನ LSG Sky Chefs India Private Limited ಕಂಪನಿಯಿಂದ ರೂ. 8,50,000/- ದೇಣಿಗೆ

ಬೆಂಗಳೂರಿನ LSG Sky Chefs India Private Limited ಕಂಪನಿಯು ತನ್ನ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (CSR) ಉಪಕ್ರಮಗಳ ಮೂಲಕ ಸಮಾಜದ ಹಿತಕ್ಕಾಗಿ ಮಹತ್ವದ ಸೇವೆಯನ್ನು ಸಲ್ಲಿಸುತ್ತಿರುವುದು ಪ್ರಶಂಸನೀಯವಾಗಿದೆ. ಸಮಾಜದ ಅಗತ್ಯಗಳನ್ನು ಸೂಕ್ಷ್ಮವಾಗಿ ಅರಿತು ಸೇವಾಭಾವದಿಂದ ಕಾರ್ಯನಿರ್ವಹಿಸುತ್ತಿರುವ ಈ ಕಂಪನಿಯ ಸಮಾಜಮುಖಿ ಮನೋಭಾವ ಹಾಗೂ ಬದ್ಧತೆ ಇತರ ಕಂಪನಿಗಳಿಗೆ ಆದರ್ಶವಾಗಿದೆ.

CSR ಯೋಜನೆಯಡಿ, ಕನ್ಯಾಡಿಯಲ್ಲಿ ಬೆನ್ನುಹುರಿ ಗಾಯಗೊಂಡ ದಿವ್ಯಾಂಗರಿಗಾಗಿ ನಿರ್ಮಾಣ ಹಂತದಲ್ಲಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ಕಾರ್ಯಕ್ಕೆ ಈ ಕಂಪನಿಯು ರೂ. 8,50,000/- ದೇಣಿಗೆಯನ್ನು ನೀಡಿ ಮಹತ್ತರ ಬೆಂಬಲವನ್ನು ಒದಗಿಸಿದೆ. ಈ ಆರ್ಥಿಕ ನೆರವು ನಿರ್ಮಾಣ ಕಾರ್ಯವನ್ನು ಇನ್ನಷ್ಟು ವೇಗಗೊಳಿಸುವುದರೊಂದಿಗೆ, ಮುಂದಿನ ದಿನಗಳಲ್ಲಿ ದಿವ್ಯಾಂಗರಿಗೆ ಸಮಗ್ರ ಮತ್ತು ಗುಣಮಟ್ಟದ ಪುನಶ್ಚೇತನ ಸೇವೆಗಳನ್ನು ಒದಗಿಸಲು ಸಹಕಾರಿ ಆಗಲಿದೆ.

LSG Sky Chefs India Private Limited ಕಂಪನಿಯು ಕಳೆದ 2 ವರ್ಷಗಳಿಂದ ನಿರಂತರವಾಗಿ CSR ನಿಧಿಗಳ ಮೂಲಕ ನಮ್ಮ ಸಂಸ್ಥೆಯ ಕಾರ್ಯಗಳಿಗೆ ಬೆಂಬಲ ನೀಡುತ್ತಿದ್ದು, ಸೇವಾ ಚಟುವಟಿಕೆಗಳ ವಿಸ್ತರಣೆಯಲ್ಲಿ ಪ್ರಮುಖ ಪಾತ್ರವಹಿಸಿದೆ. ಅವರ ವಿಶ್ವಾಸ ಮತ್ತು ನಿರಂತರ ಸಹಕಾರ ನಮ್ಮ ಕಾರ್ಯಗಳಿಗೆ ಮತ್ತಷ್ಟು ಉತ್ತೇಜನ ನೀಡುತ್ತಿದೆ.

ಈ ಅಮೂಲ್ಯ ಸಹಾಯಕ್ಕಾಗಿ LSG Sky Chefs India Private Limited ಕಂಪನಿಯ ಆಡಳಿತ ಮಂಡಳಿ ಹಾಗೂ ಎಲ್ಲಾ ಸದಸ್ಯರಿಗೆ ನಮ್ಮ ಸಂಸ್ಥೆಯ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

# ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ವಿಶ್ವನಾಥ ನಾನು ತೀರ್ಥಹಳ್ಳಿ ತಾಲೂಕು ಶಿವಮೊಗ್ಗ ಜಿಲ್ಲೆ, ಬಿದರಹಳ್ಳಿ ಗ್ರಾಮದವನು. ನಾನು ವ್ಯವಸಾಯ ಮಾಡುವವನು. ಹೀಗೆ ಒಂದು ದಿನ ಮರಹತ್ತಿ ಕೆಲಸ ಮಾಡುವಾಗ ಕಾಲು ಜಾರಿ ಮರದಿಂದ ಬಿದ್ದಿದೆ ಅವಾಗ ಕಾರಿನಲ್ಲಿ ನನ್ನನ್ನು ತೀರ್ಥಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಸ್ಪೈನಲ್ ಕಾರ್ಡ್ ಗೆ ಪೆಟ್ಟಾಗಿದೆ. ಹೆಚ್ಚಿನ ಚಿಕಿತ್ಸೆಗಾಗಿ ಮಣಿಪಾಲ ಆಸ್ಪತ್ರೆಗೆ ಹೋಗಬೇಕು ಎಂದರು. ಅಲ್ಲಿಗೆ ಹೋಗಿ ಶಸ್ತ್ರಚಿಕಿತ್ಸೆ ಆದಮೇಲೆ T5 T6 level ಎಂದು ಗೊತ್ತಾಯಿತು. ಸರ್ಜರಿ ಮುಗಿದ ಮೇಲೆ ಡಾ. ಮಾಧವ ಪೈ ಮತ್ತು ಡಾ. ಶ್ಯಾಮ ಸುಂದರ್ ಭಟ್ ರವರು ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಳ್ಳಲು ತಿಳಿಸಿದರು. ಆಮೇಲೆ ಎರಡು ತಿಂಗಳು ಆದಮೇಲೆ ಇಲ್ಲಿಗೆ ಆಂಬುಲೆನ್ಸ್ ಅಲ್ಲಿ ಬಂದೆವು. ಮೊದಲು ನಾನು ಬರುವಾಗ ಮಲಗಿಕೊಂಡ ಸ್ಥಿತಿಯಲ್ಲಿ ಬಂದಿದ್ದೆ. ಆದರೆ ಇಲ್ಲಿಗೆ ಬಂದ ಮೇಲೆ ವಿಖ್ಯಾತಿ ಮೇಡಂ ಧನೇಂದ್ರ ಸರ್ ಅಂಥೋನಿ ಸರ್, ವಿರೂಪಾಕ್ಷಿ ಸರ್ ಎಲ್ಲರೂ ನನಗೆ ರಿಹ್ಯಾಬ್ ಮಾಡಿಸಿದರು. ನಾನು ಈಗ ನನ್ನ ಕೆಲಸವನ್ನು ನಾನೇ ಮಾಡಿಕೊಳ್ಳುವಂತೆ ಸಿದ್ಧವಾಗಿದ್ದೇನೆ. ಅವರಿಗೆ ನನ್ನ ಧನ್ಯವಾದಗಳನ್ನು ಹೇಳುತ್ತೇನೆ. ಸೇವಾಧಾಮ ನನಗೆ ಮರುಜನ್ಮ ಕೊಟ್ಟಿದೆ ಇಲ್ಲಿ ಊಟದ ವ್ಯವಸ್ಥೆ ತುಂಬಾ ಚೆನ್ನಾಗಿದೆ ಇಲ್ಲಿಗೆ ಬಂದು ಮೂರು ತಿಂಗಳು ಆರು ದಿನ ಇದ್ದೆ ತುಂಬಾ ಖುಷಿಯಾಗಿದೆ.. ಎಲ್ಲರಿಗೂ ಧನ್ಯವಾದಗಳು.

**ಇತಿ ತಮ್ಮ ವಿಶ್ವಾಸಿ**
**ವಿಶ್ವನಾಥ, ತೀರ್ಥಹಳ್ಳಿ**

## ಕುಶಾಲನಗರದ ಶ್ರೀಮತಿ ಪ್ರಮೀಳಾ ಸತ್ಯ ರವರಿಂದ ಸೌತಡ್ಕ ಸೇವಾಧಾಮಕ್ಕೆ ಗಾಲಿಕುರ್ಚಿ ಕೊಡುಗೆ



**ಕುಶಾಲನಗರ (ಮಾ. 18):** ಬೆನ್ನುಹುರಿ ಅಪಘಾತಕ್ಕೊಳಗಾದ ಶ್ರೀಮತಿ ಪ್ರಮೀಳಾ ಸತ್ಯ ಹಾಗೂ ಕುಟುಂಬಸ್ಥರು ಸೌತಡ್ಕ ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ರೂ. 40,000/- ವೆಚ್ಚದ ನಿಯೋ ಫ್ಲೈ ಗಾಲಿಕುರ್ಚಿಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ಗಾಲಿಕುರ್ಚಿಯನ್ನು ಸ್ವೀಕರಿಸಿ ಸಂಸ್ಥೆಯ ಪರವಾಗಿ ಧನ್ಯವಾದವಿತ್ತರು.

## ಹತ್ಯಡ್ಕದ ಶ್ರೀ ಮೋಹನ್ ತಮಣ್ಕರ್ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ




**ಉಜಿರೆ (ಫೆ. 06):** ಬೆಳ್ತಂಗಡಿ ತಾಲೂಕಿನ ಹತ್ಯಡ್ಕದ ನಿವಾಸಿಯಾಗಿರುವ ಶ್ರೀ ಮೋಹನ್ ತಮಣ್ಕರ್ ರವರು, ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ. 5,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಈ ಸಂದರ್ಭದಲ್ಲಿ ಸೇವಾಭಾರತಿ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಉಜಿರೆಯ ಬ್ರಹ್ಮಕಲಶೋತ್ಸವದಲ್ಲಿ ಕನ್ಯಾಡಿ ಸೇವಾಭಾರತಿಯ ಸ್ಟಾಲ್ ಉದ್ಘಾಟನೆ



**ಉಜಿರೆ (ಫೆ. 04):** ಶ್ರೀ ಜನಾರ್ಧನ ಸ್ವಾಮಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ಸೇವಾಭಾರತಿಯಿಂದ ಸೇವಾಕಾರ್ಯಗಳ ಪರಿಚಯಕ್ಕಾಗಿ ವಿಶೇಷ ಸ್ಟಾಲ್ ಅನ್ನು ತೆರೆಯಲಾಗಿದ್ದು, ಈ ಸ್ಟಾಲ್‌ನ ಉದ್ಘಾಟನೆಯನ್ನು ವಿಧಾನ ಪರಿಷತ್ ಸದಸ್ಯರಾದ ಶ್ರೀ ಪ್ರತಾಪ್ ಸಿಂಹ ನಾಯಕ್ ರವರು ಫೆಬ್ರವರಿ 04 ರಂದು ದೀಪ ಬೆಳಗಿಸುವುದರ ಮೂಲಕ ಸ್ಟಾಲ್ ಅನ್ನು ವಿದ್ಯುಕ್ತವಾಗಿ ಚಾಲನೆ ನೀಡಿದರು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರನ್ನು ಪ್ರೋತ್ಸಾಹಿಸಲು ಜೀವನೋಪಯೋಗಕ್ಕಾಗಿ ಅವರುಗಳು ತಯಾರಿಸಿದ ಉತ್ಪನ್ನಗಳನ್ನು (Chros items, ಬತ್ತಿ, ಜೇನುತುಪ್ಪ) ಸ್ಟಾಲ್ ನಲ್ಲಿ ಮಾರಾಟಕ್ಕೆ ಇಡಲಾಯಿತು. ದಿವ್ಯಾಂಗರು ತಯಾರಿಸಿದ ಉತ್ಪನ್ನಗಳನ್ನು ಖರೀದಿಸುವಲ್ಲಿ ಭಕ್ತರು ಉತ್ತಮ ಸ್ಪಂದನೆ ನೀಡಿರುವುದು ಶ್ಲಾಘನೀಯ.

ಈ ಸಂದರ್ಭದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್‌ನ ರೋ। ಸಂದೇಶ್ ರಾವ್, ಸ್ವಯಂಸೇವಕರಾದ ಶ್ರೀ ಚಂದನ್ ಗುಡಿಗಾರ್, ಸೇವಾಧಾಮದ ಫಲಾನುಭವಿ ಶ್ರೀ ಜಗದೀಶ್ ಕನ್ಯಾಡಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸೇವಾಭಾರತಿ ಸ್ಟಾಲ್ ತೆರೆಯಲು ಅವಕಾಶ ನೀಡಿದ ಉಜಿರೆ ಶ್ರೀ ಜನಾರ್ಧನ ಸ್ವಾಮಿ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಬ್ರಹ್ಮ ಕಲಶೋತ್ಸವ ಸಮಿತಿಯ ಮುಖ್ಯಸ್ಥರಿಗೂ ಸಂಸ್ಥೆಯ ವಿಶ್ವಸ್ಥ ಮಂಡಳಿ ಹಾಗೂ ಸಿಬ್ಬಂದಿವರ್ಗದವರ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು ಸಲ್ಲಿಸುತ್ತೇವೆ.

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಚಿಕ್ಕಮಗಳೂರಿನ ಶ್ರೀ ರಾಜೇಶ್ ರವರಿಂದ ತರಕಾರಿ ಹಸ್ತಾಂತರ



**ಕನ್ಯಾಡಿ (ಮಾ. 19):** ಸಂಸ್ಥೆಯ ಹಿತೈಷಿ ಚಿಕ್ಕಮಗಳೂರಿನ ಶ್ರೀ ರಾಜೇಶ್ ರವರು ಕನ್ಯಾಡಿ ಸೇವಾನಿಕೇತನಕ್ಕೆ ಮಾರ್ಚ್ 19 ರಂದು ಭೇಟಿ ನೀಡಿ ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ವಸ್ತುರೂಪದಲ್ಲಿ ದೇಣಿಗೆಯಾಗಿ ತರಕಾರಿಗಳನ್ನು ನೀಡಿರುತ್ತಾರೆ.

ಈ ಸಂದರ್ಭದಲ್ಲಿ ಮೂಡಬಿದ್ರೆಯ ಶ್ರೀ ಹರೀಶ್ ಹಾಗೂ ಚಿಕ್ಕಮಗಳೂರಿನ ಶ್ರೀ ಸುರೇಂದ್ರ ರವರು ಉಪಸ್ಥಿತರಿದ್ದರು.

ಸೇವಾಭಾರತಿ ಸಂಸ್ಥೆಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಹಾಗೂ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕ ಶ್ರೀ ಮೋಹನ್ ಎಸ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಬೆಂಗಳೂರಿನ ಶ್ರೀ ಹರೀಶ್ ಟಿ ಪಿ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ




**ಕನ್ಯಾಡಿ (ಮಾ. 14):** ಸಂಸ್ಥೆಯ ಹಿತೈಷಿ ಹಾಗೂ ದಾನಿಗಳಾದ ಬೆಂಗಳೂರಿನ ಶ್ರೀ ಹರೀಶ್ ಟಿ. ಪಿ ಹಾಗೂ ಅವರ ಮಗ ಶ್ರೀ ಅಕ್ಷಯ್ ರವರು ಕನ್ಯಾಡಿ ಸೇವಾನಿಕೇತನಕ್ಕೆ ಮಾರ್ಚ್ 14 ರಂದು ಭೇಟಿ ನೀಡಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಈ ಸಂದರ್ಭದಲ್ಲಿ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಮೂಡಿಗೆರೆಯ ಶ್ರೀ ಎಚ್ ಎಲ್ ಶ್ಯಾಮ್ ಭಟ್ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ




**ಮೂಡಿಗೆರೆ (ಮಾ. 14):** ಶ್ರೀ ಎಚ್ ಎಲ್ ಶ್ಯಾಮ್ ಭಟ್ ರವರು ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.10,001/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

# ಸೇವಾನಿಕೇತನದಲ್ಲಿ ವಾರದ ಭಜನೆ



ಶ್ರೀಮತಿ ಸ್ವಾತಿ ಪೈ ಮತ್ತು ತಂಡ, ಕನ್ಯಾಡಿ



ಶ್ರೀ ರಾಮ ಭಜನಾ ಮಂಡಳಿ ದೊಂಡೋಲೆ, ಧರ್ಮಸ್ಥಳ



ಜನನಿ ಭಜನಾ ಮಂಡಳಿ, ಧರ್ಮಸ್ಥಳ



ಹರೇ ಕೃಷ್ಣ ಭಜನಾ ತಂಡ, ಉಜಿರೆ

# "ಪುನಶ್ಚೇತನದ ಹಾದಿಯಲ್ಲಿ ಚೈತನ್ಯ ತುಂಬುವ ಸೇವಾಧಾಮ!"













## ಮೂಡಿಗೆರೆಯ ಶ್ರೀ ಮಂಜುನಾಥ್ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ

**ಮೂಡಿಗೆರೆ (ಮಾ. 14):** ಬೆನ್ನುಹುರಿ ಅಪಘಾತಕ್ಕೊಳಗಾದ ಮೂಡಿಗೆರೆಯ ಶ್ರೀ ಮಂಜುನಾಥ್ ರವರು ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.2000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

# ಸೇವಾಸಂಗಮ




**ಮಾರ್ಚ್ ತಿಂಗಳ ಸೇವಾಸಂಗಮ ಆನ್ ಲೈನ್ ಮಾಹಿತಿ ಕಾರ್ಯಾಗಾರದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಡಾ. ಸ್ತುತಿ ಆರ್ ಎಸ್ ರವರು ಬೆನ್ನುಹುರಿಗೆ ಪ್ರಕೃತಿಯ ಸ್ಪರ್ಶ - ಸಮಗ್ರ ನೈಸರ್ಗಿಕ ಹಾರೈಕೆಯ ಬಗ್ಗೆ ಮಾಹಿತಿ ನೀಡಿದರು. ಕಾರ್ಯಾಗಾರದಲ್ಲಿ ಒಟ್ಟು 60 ಮಂದಿ ಭಾಗವಹಿಸಿದ್ದರು**

## ಸುಲ್ಕೇರಿಮೊಗ್ರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ದಿಂದ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ರೂ.10,000/- ದೇಣಿಗೆ.



ಸುಲ್ಕೇರಿಮೊಗ್ರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ(ನಿ.), ದಿಂದ0 ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡಕ್ಕೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಮ್ಮಾಜಿ ಕೆ , ಅಧ್ಯಕ್ಷರಾದ ಶ್ರೀ ಸುಧೀರ್ ಆರ್ ಸುವರ್ಣ, ಉಪಾಧ್ಯಕ್ಷರಾದ ಶ್ರೀ ಶೀನಪ್ಪ ಎಂ ಹಾಗೂ ಸಂಘದ ನಿರ್ದೇಶಕರುಗಳು ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರಿಗೆ ಹಸ್ತಾಂತರಿಸಿದರು.

## ಸುಲ್ಕೇರಿಮೊಗ್ರು ಪ್ರಾ. ಕೃ. ಪ. ಸ. ಸಂಘದ ಉಪಾಧ್ಯಕ್ಷರಾದ ಶೀನಪ್ಪ ಎಂ ರವರಿಂದ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ರೂ. 1,000/- ದೇಣಿಗೆ



**ಶಿರ್ಲಾಲು (ಮಾ. 26)**: ಸುಲ್ಕೇರಿಮೊಗ್ರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಉಪಾಧ್ಯಕ್ಷರಾದ ಶ್ರೀ ಶೀನಪ್ಪ ಎಂ ರವರು ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ರೂ.1,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.


ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಈ ಸಂಧರ್ಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಸುಧೀರ್ ಆರ್ ಸುವರ್ಣ, ನಿರ್ದೇಶಕರುಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಮ್ಮಾಜಿ ಕೆ ಉಪಸ್ಥಿತರಿದ್ದರು.

## ಸೇವಾಧಾಮದ ಮಾರ್ಚ್ ತಿಂಗಳ ಸೇವಾಕಾರ್ಯಗಳು

- **ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್** - 54
- **ಗಾಲಿಕುರ್ಚಿ ವಿತರಣೆ** - 32
- **ಹೊಸ ಗುರುತಿಸುವಿಕೆ** - 04
- **ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು** - 09


## ಕೊಕ್ಕಡದ ಶ್ರೀಮತಿ ಮಾಳವಿಕಾ ಶ್ರೀನಿವಾಸ್ ರಾವ್ ರವರಿಂದ ಗಾಲಿಕುರ್ಚಿಗೆ ದೇಣಿಗೆ




**ಸೌತಡ್ಕ (ಮಾ.15):** ಕೊಕ್ಕಡದ ಶ್ರೀಮತಿ ಮಾಳವಿಕಾ ಶ್ರೀನಿವಾಸ್ ರಾವ್ ರವರು ಮಾರ್ಚ್ 15 ರಂದು ಸೌತಡ್ಕದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ 'ಸೇವಾಧಾಮ'ಕ್ಕೆ ಭೇಟಿ ನೀಡಿ, ಒಂದು ಗಾಲಿಕುರ್ಚಿಗೆ ಅಗತ್ಯವಿರುವ ರೂ.15,000/- ಮೊತ್ತವನ್ನು ಧನಸಹಾಯವಾಗಿ ನೀಡಿ ಸಹಕರಿಸಿದ್ದಾರೆ. ಸೇವಾಭಾರತಿ ಅಧ್ಯಕ್ಷರಾದ ಶ್ರೀ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಈ ಸಂದರ್ಭದಲ್ಲಿ ನಿವೃತ್ತ ಮಹಿಳಾ ಆರೋಗ್ಯ ಸಂದರ್ಶಕರು ಹಾಗೂ ಸೇವಾಭಾರತಿ POSH ಕಮಿಟಿಯ ಅಧ್ಯಕ್ಷರಾದ ಶ್ರೀಮತಿ ವಸಂತಿ ಗೌಡ, ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮೂಡಿಗೆರೆಯ ಶ್ರೀ ಸುರೇಂದ್ರ ಕೆ ಎಸ್ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ




**ಮೂಡಿಗೆರೆ (ಮಾ. 14):** ಶ್ರೀ ಸುರೇಂದ್ರ ಕೆ ಎಸ್ ಹಾಗೂ ಕುಟುಂಬಸ್ಥರು ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.2,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಮೂಡಿಗೆರೆಯ ಶ್ರೀ ನಾಗೇಶ್ ನಾಯಕ್ ಯು ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ



**ಮೂಡಿಗೆರೆ (ಮಾ. 14):** ಶ್ರೀ ನಾಗೇಶ್ ನಾಯಕ್ ಯು ರವರು ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.2,500/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಕೊಪ್ಪ ಪ್ರಶಮನಿ ಆಸ್ಪತ್ರೆಯ ಡಾ. ಉದಯಶಂಕರ್ ರವರು ಸೌತಡ್ಕ ಸೇವಾಧಾಮಕ್ಕೆ ಭೇಟಿ




**ಕನ್ಯಾಡಿ (ಮಾ. 19):** ಕೊಪ್ಪ ಪ್ರಶಮನಿ ಆಸ್ಪತ್ರೆಯ ಡಾ. ಉದಯಶಂಕರ್ ಹಾಗೂ ಅವರ ಪತ್ನಿ ಶ್ರೀಮತಿ ರೇಖಾ ರವರು ಮಾರ್ಚ್ 19 ರಂದು ಕನ್ಯಾಡಿ ಸೇವಾನಿಕೇತನದ ನೂತನ ಕಾರ್ಯಾಲಯ ಮತ್ತು ಸೌತಡ್ಕದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ 'ಸೇವಾಧಾಮ'ಕ್ಕೆ ಭೇಟಿ ನೀಡಿದರು.

ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ, ಸೇವಾಧಾಮದ ದಿವ್ಯಾಂಗರ ಆರೋಗ್ಯವನ್ನು ವಿಚಾರಿಸಿ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಸಂತೋಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಉಪಾಧ್ಯಕ್ಷರಾದ ಶ್ರೀ ಬಾಲಕೃಷ್ಣ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಮಹನೀಯ ದಾನಿಗಳು

- ಶ್ರೀ ಗಣೇಶ್, ಬಂಟ್ವಾಳ
- ಶ್ರೀ ಲೋಕೇಶ್ ಕೆ ವಿ, ಕೊಡಗು
- ಶ್ರೀ ಕೆ ಪ್ರಭಾಕರನ್ ನಾಯರ್, ಸುಳ್ಯ
- ಶ್ರೀ ಮೋಹನ್ ತಮನ್ಕರ್, ಅರಸಿನಮಕ್ಕಿ
- ಶ್ರೀ ರಾಮಚಂದ್ರ, ಸುಳ್ಯ
- ಕುಮಾರಿ ಅನು, ಕೊಡಗು
- ಶ್ರೀ ಎಸ್ ಕೆ ಮಂಜುನಾಥ್ ಭಟ್, ಬೆಂಗಳೂರು
- ಶ್ರೀಮತಿ ಜಯಂತಿ ಜಸಿಂತಾ ಸ್ಟೆಲ್ಲಾ, ನಡ
- ಶ್ರೀ ಹರೀಶ್ ಟಿ ಪಿ, ಬೆಂಗಳೂರು
- ಶ್ರೀ ಅನಂತ್ ಮುನೋಳಿ, ಬೆಂಗಳೂರು
- ಶ್ರೀ ಗಣೇಶ್  ಪಿ, ಕೊಕ್ಕಡ
- ಕು ಭವ್ಯಶ್ರೀ ಜಿ ಕೆ, ಕೊಡಗು
- ಶ್ರೀ ಸುರೇಂದ್ರನಾಥ್ ಕೆ ಎಸ್, ಮೂಡಿಗೆರೆ
- ಶ್ರೀ ಎಚ್ ಎಲ್ ಶ್ಯಾಮ್ ಭಟ್, ಮೂಡಿಗೆರೆ
- ಶ್ರೀ ದರ್ಶನ ಎಮ್ ಆರ್, ಕನ್ಯಾಡಿ
- ಶ್ರೀ ನಾಗೇಶ್ ನಾಯಕ್ ಯು, ಮೂಡಿಗೆರೆ
- ಶ್ರೀ ಮಂಜುನಾಥ್ ಎಸ್, ಮೂಡಿಗೆರೆ
- ಶ್ರೀ ಮಾಳವಿಕಾ ಶ್ರೀನಿವಾಸ್ ರಾವ್, ಕೊಕ್ಕಡ
- ಶ್ರೀ ಎಚ್ ಅಮರನಾಥ್ ರಾವ್, ಉಡುಪಿ
- ಶ್ರೀ ಪ್ರಕಾಶ್ ಗಡಿಯಾರ್, ಉಡುಪಿ
- ಶ್ರೀ ದತ್ತಾತ್ರೇಯ ಮಂಜುನಾಥ್ ನಾಯ್ಕ್, ಹೊನ್ನಾವರ
- ಶ್ರೀ ನಿಶಾಂತ್ ಬಿ ಎಸ್, ಶಿರ್ಲಾಲು
- ಶ್ರೀ ಲಕ್ಷ್ಮೀನಾರಾಯಣ ಕೆ ಎಸ್, ಉಜಿರೆ
- ಶ್ರೀ ಮುನಿಸ್ವಾಮಿ, ಬೆಂಗಳೂರು
- ಶ್ರೀ ನಾರಾಯಣ ರಾವ್, ತೆಂಕಕಾರಂದೂರು
- ಶ್ರೀ ಶೀನಪ್ಪ ಎಂ, ಶಿರ್ಲಾಲು
- ಶ್ರೀ ರತ್ನಾಕರ್ ರಾವ್ ಎಚ್, ಗುರುವಾಯನಕೆರೆ
- ಕುಮಾರಿ ಸಮೀಕ್ಷಾ, ಅಳದಂಗಡಿ
- ಡಾ ಎಚ್ ಅಶೋಕ್, ಉಡುಪಿ
- ಶ್ರೀ ಗಿರೀಶ್ ಎಮ್ ಎನ್, ರಾಮನಗರ
- ಶ್ರೀ ಎನ್ ಅಶೋಧರ, ಸುಲ್ಕೇರಿಮೊಗ್ರು
- ಶ್ರೀ ಅಮ್ಮಾಜಿ ಕೆ, ಸುಲ್ಕೇರಿಮೊಗ್ರು
- ಶ್ರೀಮತಿ ಗೀತಾ ಹೆಬ್ಬಾರ್, ಕುಮಟಾ
- ಕುಮಾರಿ ಲತಾ ಮಗೇಶ್ವರಿ, ಉಜಿರೆ
- ಶ್ರೀ ನೀರಜ್ ಶೆಟ್ಟಿ, ಕುತ್ಯಾರ್
- ಶ್ರೀ ಸಾಗರ್ ಶೆಟ್ಟಿ, ಕುತ್ಯಾರ್
- ಕುಮಾರಿ ಸೃಜನಾ ಶೆಟ್ಟಿ, ಕುತ್ಯಾರ್
- ಶ್ರೀ ವೆಂಕಟೇಶ್ ಮೂರ್ತಿ, ಬೆಂಗಳೂರು
- ಶ್ರೀ ಗಿರೀಶ್ ಕೆ ಎನ್, ಉಡುಪಿ
- ಶ್ರೀ ಸುರೇಂದ್ರ ಕುಡ್ವ, ಉಜಿರೆ
- ಶ್ರೀ ನಂದ ಭಿಡೆ, ಮುಂಡಾಜೆ
- ಶ್ರೀ ಮಹಾವೀರ ಇಂದ್ರ, ನೂಜಿಬಾಳ್ತಿಲ

## ಸೇವಾನಿಧಿ ದಾನಿಗಳು

- ಶ್ರೀ ಕೆ ರಾಘವೇಂದ್ರ ಶಾಸ್ತ್ರೀ, ಧರ್ಮಸ್ಥಳ
- ಶ್ರೀ ಕಾರ್ತಿಕ್ ಕೆ, ಧರ್ಮಸ್ಥಳ
- ಶ್ರೀಮತಿ ಬಬಿತಾ, ಕನ್ಯಾಡಿ
- ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
- ಡಾ ರಾಮಕೃಷ್ಣ ಭಟ್ ಜಿ ಎನ್, ಕನ್ಯಾಡಿ
- ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀಮತಿ ಜಯಂತಿ ಪುರಂದರ, ನಾರ್ಯ
- ಶ್ರೀಮತಿ ದಿವ್ಯ ಪುರಂದರ, ಬೆಂಗಳೂರು
- ಮಾಸ್ಟರ್ ಅದ್ವೈತ್ ಪೈ, ಕನ್ಯಾಡಿ
- ಶ್ರೀಮತಿ ಸವಿತಾ ಎಮ್ ರಾವ್, ಕನ್ಯಾಡಿ
- ಶ್ರೀ ಮಧ್ವರಾಜ್ ಎಂ ಜಿ, ಧರ್ಮಸ್ಥಳ
- ಶ್ರೀ ಯು ರಮೇಶ್ ಪ್ರಭು, ಉಜಿರೆ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀ ನಿತಿನ್, ಉಜಿರೆ
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ಪ್ರಜ್ವಲ್ ಜೆ, ದೊಂಡೋಲೆ
- ಶ್ರೀ ದಿವಾಕರ್ ರಾವ್, ಧರ್ಮಸ್ಥಳ
- ಶ್ರೀ ಕೆ ವಿನಾಯಕ್ ರಾವ್, ಕನ್ಯಾಡಿ
- ಶ್ರೀಮತಿ ರವಿಜಾ ಎಸ್ ರಾವ್, ಕನ್ಯಾಡಿ
- ಶ್ರೀ ಅಣ್ಣು ದೇವಾಡಿಗ, ಧರ್ಮಸ್ಥಳ
- ಶ್ರೀ ಬಾಲಕೃಷ್ಣ, ರಾವ್ ಕೆ, ಕನ್ಯಾಡಿ
- ಶ್ರೀ ಮಧುಸೂಧನ್, ಉಜಿರೆ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ರವೀಂದ್ರ ಪಿ, ಕೊಕ್ಕಡ
- ಶ್ರೀ ನೀಲಕಂಠ, ನಾರ್ಯ
- ಶ್ರೀ ಹರ್ಷಿತ್ ಕುಮಾರ್, ಧರ್ಮಸ್ಥಳ
- ಶ್ರೀ ಸಂತೋಷ್ ಕೆ, ಕೊಕ್ಕಡ
- ಶ್ರೀ ರಕ್ಷಿತ್ ಎಸ್ ಕುಲಾಲ್, ಅಳದಂಗಡಿ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಬೇಬಿ ವಿಹಾನ ಎಮ್ ಎಮ್, ನಿಡ್ಲೆ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ಗಣೇಶ್ ಶೆಟ್ಟಿ, ಮದ್ದಡ್ಕ
- ಶ್ರೀ ಜಯಾನಂದ ಎಮ್, ಕನ್ಯಾಡಿ
- ಶ್ರೀ ದೀಕ್ಷಿತ್ ಎಮ್, ನಿಡ್ಲೆ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ಸುನಿಲ್ ಕುಮಾರ್ ಜೈನ್, ದೊಂಡೋಲೆ
- ಶ್ರೀ ಪ್ರೀಜೇಶ್, ಧರ್ಮಸ್ಥಳ

## ಸಂಘ ಸಂಸ್ಥೆಗಳು

- ಆಭರಣ್ ಟೈಮ್ ಲೆಸ್ ಜ್ಯುವೆಲ್ಲರಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
- LSG SKY CHEFS (INDIA) PRIVATE LIMITED, Bangalore
- Magnus Lubricants Private Limited, Maharastra
- LIC Golden Jubilee Foundation, Mumbai
- SJF Philanthropic Organisation, Bangalore
- ಸುಲ್ಕೇರಿಮೊಗ್ರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.), ಶಿರ್ಲಾಲು

## ವಸ್ತು ರೂಪದಲ್ಲಿ ದೇಣಿಗೆ

- ಉಜಿರೆ ಹವ್ಯಕ ವಲಯ, ಉಜಿರೆ
- ಶ್ರೀ ರಾಜೇಶ್, ಚಿಕ್ಕಮಗಳೂರು
- ಶ್ರೀ ಸಂತೋಷ್ ಎಮ್ ಆರ್, ಮೂಡಿಗೆರೆ
- ಶ್ರೀ ನಂದನ್ ಎಚ್ ಬಿ, ಚಿಕ್ಕಮಗಳೂರು

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ದಿವ್ಯಾಂಗರಿಗೆ ವೈದ್ಯರಿಂದ ಸಮಾಲೋಚನೆ



ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪ್ರತಿ ತಿಂಗಳು ದಿವ್ಯಾಂಗರಿಗೆ ನಡೆಸುವಂತಹ ವೈದ್ಯರ ಸಮಾಲೋಚನೆಯಲ್ಲಿ ಮಾರ್ಚ್ ತಿಂಗಳಿನಂದು ಮಂಗಳೂರು ಕೆಎಂಸಿ ಆಸ್ಪತ್ರೆಯ ಸ್ಪೈನ್ ಶಸ್ತ್ರಚಿಕಿತ್ಸಕರಾದ ಡಾ. ವೈಶಾಖ್ ಬಿ ಭಟ್ ಸೇವಾಧಾಮಕ್ಕೆ ಭೇಟಿ ನೀಡಿದ್ದರು. ದಿವ್ಯಾಂಗರನ್ನು ಪರೀಕ್ಷೆ ಮಾಡಿ ಅವರ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡಿದರು. ಈ ಸಮಾಲೋಚನೆಯಲ್ಲಿ 8 ಮಂದಿ ದಿವ್ಯಾಂಗರು ಭಾಗವಹಿಸಿದ್ದರು.

## ಕರಂಬಾರಿನ ಶ್ರೀ ಕೆ ನಾರಾಯಣ ರಾವ್ ರವರಿಂದ ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ರೂ. 5,000/- ದೇಣಿಗೆ



**ಶಿರ್ಲಾಲು (ಮಾ. 26):** ಬೆಳ್ತಂಗಡಿ ತಾಲೂಕಿನ ಕರಂಬಾರು ನಿವಾಸಿ ಶ್ರೀ ಕೆ ನಾರಾಯಣ ರಾವ್ ರವರು ನೂತನ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕಾಗಿ ರೂ.5,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಈ ಸಂಧರ್ಭದಲ್ಲಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಅಮ್ಮಾಜಿ ಕೆ, ಅಧ್ಯಕ್ಷರಾದ ಶ್ರೀ ಸುಧೀರ್ ಆರ್ ಸುವರ್ಣ, ಉಪಾಧ್ಯಕ್ಷರಾದ ಶ್ರೀ ಶೀನಪ್ಪ ಎಂ ಹಾಗೂ ನಿರ್ದೇಶಕರುಗಳು ಉಪಸ್ಥಿತರಿದ್ದರು.

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆ



**ಸೌತಡ್ಕ (ಮಾ.30):** ಧರ್ಮಸ್ಥಳ ಗ್ರಾಮದ ಬೊಲ್ಮ ನಿವಾಸಿಯಾಗಿರುವ ಶ್ರೀ ದರ್ಶನ್ ಎಂ ಆರ್ ಹಾಗೂ ಪತ್ನಿ ಶ್ರೀಮತಿ ಗಗನ್ಯ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಮಾರ್ಚ್ 30 ರಂದು ಭೇಟಿ ನೀಡಿ, ಒಂದು ಹೊತ್ತಿನ ಊಟಕ್ಕಾಗಿ ರೂ. 3,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.ಸೇವಾಭಾರತಿಯ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

ಈ ಸಂಧರ್ಭದಲ್ಲಿ ಪಿಜತ್ನಡ್ಕದ ಕು. ಅದಿತಿ ಮಾಧವ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರು, ಆರೈಕೆದಾರರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಹೊಸಂಗಡಿ ಪೇರದ ಶ್ರೀ ಮಹಾವೀರ ಇಂದ್ರ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ



**ಸೌತಡ್ಕ(ಮಾ. 23):** ಹೊಸಂಗಡಿ ಪೇರದ ಶ್ರೀ ಮಹಾವೀರ ಇಂದ್ರ ರವರು ಮಾರ್ಚ್ 23 ರಂದು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ, ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ.1000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಧಾಮದ ಫಿಸಿಯೋಥೆರಪಿಸ್ಟ್ ಡಾ. ವಿಖ್ಯಾತಿ ವೈ. ಆರ್ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಡಾ. ಸುಬ್ರಮಣ್ಯ ಹಾಗೂ ಡಾ. ಕೆ. ಪಿ. ನಂಬಿಯಾರ್ ಬೈಂದೂರು ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭೇಟಿ




**ಬೈಂದೂರು (ಮಾ.20):** ಸೇವಾಧಾಮ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಡಾ. ಸುಬ್ರಮಣ್ಯ ಹಾಗೂ ಡಾ. ಕೆ. ಪಿ. ನಂಬಿಯಾರ್ ರವರು ಮಾರ್ಚ್ 20 ರಂದು ಭೇಟಿ ನೀಡಿದರು.

ಭೇಟಿಯ ಸಂದರ್ಭದಲ್ಲಿ ಕೇಂದ್ರದ ಸನಿವಾಸಿಗಳ ಆರೋಗ್ಯವನ್ನು ವಿಚಾರಿಸಿದರು.

ಈ ಸಂದರ್ಭದಲ್ಲಿ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ಹಾಗೂ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ದನೇಂದ್ರ ರವರು ಉಪಸ್ಥಿತರಿದ್ದರು.

## ಕನ್ಯಾಡಿ ಸೇವಾನಿಕೇತನಕ್ಕೆ ಪೆರಿಂಜೆಯ ಶ್ರೀ ಸುಧಾಕರ್ ನೂಯಿ ಭೇಟಿ



**ಕನ್ಯಾಡಿ (ಮಾ. 30):** ಪೆರಿಂಜೆಯ ಶ್ರೀ ಸುಧಾಕರ್ ನೂಯಿ ಮತ್ತು ಶ್ರೀ ಧೀರಜ್ ರವರು ಮಾರ್ಚ್ 30 ರಂದು ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ ನೀಡಿದರು.

ನೂತನ ಕಟ್ಟಡವನ್ನು ವೀಕ್ಷಿಸಿದ ನಂತರ ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು ಸಂತೋಷ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಭೀಮ ಗೋಲ್ಡ್ CSR ಸಹಕಾರದಿಂದ ಬೈಂದೂರು ಸೇವಾಧಾಮದಲ್ಲಿ ನೀರಿನ ಘಟಕದ ಉದ್ಘಾಟನೆ



ಸಮೃದ್ಧ ಬೈಂದೂರು ಪರಿಕಲ್ಪನೆಯ 300 ಸ್ಟ್ರೀಸ್ ಯೋಜನೆಯಡಿ ಭೂಮಿ ಟ್ರಸ್ಟ್ ಸಹಕಾರದೊಂದಿಗೆ ಭೀಮ ಗೋಲ್ಡ್ ಪ್ರೈವೇಟ್ ಲಿಮಿಟೆಡ್ ಇದರ ವತಿಯಿಂದ ಸೇವಾಧಾಮ ಬೈಂದೂರಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಇದರ ಉದ್ಘಾಟನಾ ಕಾರ್ಯಕ್ರಮವನ್ನು ಮಾರ್ಚ್ 31ರಂದು ಬೈಂದೂರು ಸೇವಾಧಾಮ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರದಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ ಉದ್ಘಾಟಿಸಿ ಭೀಮ ಗೋಲ್ಡ್ ಸಂಸ್ಥೆಯ CSR ನಿಂದ ನಮ್ಮ ಸೇವಾಧಾಮ ಸಂಸ್ಥೆಗೆ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಕೊಟ್ಟಿದಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು. ಪುನಶ್ಚೇತನವನ್ನು ಪಡೆದುಕೊಳ್ಳುತ್ತಿರುವ ದಿವ್ಯಾಂಗರು ಸಕ್ಷಮವಾಗಿ ಉಜ್ವಲ ಬದುಕನ್ನು ಕಾಣಲಿ ಎಂದು ಶುಭಹಾರೈಸಿದರು.

ಈ ಸಂದರ್ಭದಲ್ಲಿ ಶ್ರೀ ವಿಶ್ವನಾಥ್ ಶೆಟ್ಟಿ , ಗೋಪಾಲ ವರ್ಸೆ, ಶ್ರೀಮತಿ ಭಾನುಮತಿ, ಶ್ರೀ ರವಿಚಂದ್ರ, ಶ್ರೀಮತಿ ಮಂಜುಳ ವಿಷ್ಣುಪ್ರಸಾಧ್, ಸೇವಾಭಾರತಿಯ ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಗ್ರಾಮಸ್ಥರು, ಪ್ರಮುಖರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಮಾರ್ಚ್ ತಿಂಗಳಲ್ಲಿ ಡಿಸ್ಚಾರ್ಜ್ ಆದವರು:




**ಕು। ಚೈತ್ರ, ರಾಣೆಬೆನ್ನೂರು**




**ಮಾಸ್ಟರ್ । ಆಖ್ಯಾನ್, ಉಡುಪಿ**




**ಶ್ರೀ ರಮೇಶ್, ಉಡುಪಿ**




**ಶ್ರೀ ವಿಶ್ವನಾಥ, ಶಿವಮೊಗ್ಗ**

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**ಮೊದಲ ಮಹಡಿಯ ಕಾಮಗಾರಿ ಪ್ರಾರಂಭಗೊಂಡಿದ್ದು, ಪಿಲ್ಲರ್ ಹಾಗೂ ಸ್ಲಾಬ್ ಕಾಮಗಾರಿ ಪೂರ್ಣಗೊಂಡಿದೆ. ಎರಡನೇ ಮಹಡಿಯ ಕೆಲಸ ಪ್ರಾರಂಭಗೊಂಡು ಪಿಲ್ಲರ್ ಹಾಗೂ ರ್‍ಯಾಂಪ್ ಕಾಂಕ್ರಿಟ್ ಆಗಿದೆ ಇದುವರೆಗೆ ಒಟ್ಟು ರೂ. 2,07,01,840/- ವೆಚ್ಚವಾಗಿದ್ದು, ಇನ್ನೂ ಮೂರು ಮಹಡಿಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಮುಂದಿನ ಹಂತದ ಕಾಮಗಾರಿ ಮುಂದುವರಿಸಲು ನಿಧಿಯ ಅವಶ್ಯಕತೆ ಇದ್ದು ದಾನಿಗಳ ಸಹಕಾರದ ನಿರೀಕ್ಷೆಯಲ್ಲಿ ನಾವಿದ್ದೇವೆ.**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ವೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿ ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. LIC ಯ ರೂ. 40 ಲಕ್ಷ ಮಂಜೂರುಗೊಂಡಿರುವ ಕಾರಣ ಅತೀ ಶೀಘ್ರದಲ್ಲಿ ಈ ಮಹಡಿ ನಿರ್ಮಾಣಗೊಳ್ಳಲಿದೆ. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

### BANK ACCOUNT DETAILS

SEVABHARATHI REGD

**Scan and Pay also**

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**


**ಶ್ರೀ ಲಕ್ಷ್ಮೀನಾರಾಯಣ ರಾವ್ ಪಿ,** ಧರ್ಮಸ್ಥಳ


**ಶ್ರೀ ಅಖಿಲೇಶ್ ಕೆ ಎಲ್**
ಪುತ್ತೂರು


**ಶ್ರೀ ಆಶ್ರಿತ್ ಸಿ ಪಿ,**
ಕನ್ಯಾಡಿ



**ಶ್ರೀ ಶ್ವಾನ್ ಡಿಸೋಜ**
ಉಜಿರೆ



**ಶ್ರೀ ಹರೀಶ್ ಟಿ ಪಿ**
ಬೆಂಗಳೂರು


**ಶ್ರೀ ಚಂದ್ರಶೇಖರ್ ಎಂ ಪೂಜಾರಿ,** ಶಿರಸಿ


**ಕು। ನಮಿತಾ ಕೆ ಎಲ್,**
ಕೊಡಗು



**ಕು। ಸಮೀಕ್ಷಾ,**
ಅಳದಂಗಡಿ


**ಕು। ಲತಾ ಮಗೆಶ್ವರಿ,**
ಉಜಿರೆ


**ಶ್ರೀ ಜನಾರ್ಧನ್,**
ಮೂಡಿಗೆರೆ


**ಶ್ರೀ ನಿಶಾಂತ್ ಪರಹಿತ್ಲು,**
ನಿಡ್ಲೆ



**ಶ್ರೀ ನಿಶಾಂತ್ ಸನಿಲ್**
ಶಿರ್ಲಾಲು


**ಶ್ರೀಮತಿ ಪೂರ್ಣ ಕಿಣಿ**
ಕನ್ಯಾಡಿ


**ರೋ ಪ್ರಭಾಕರನ್ ನಾಯರ್** ಸುಳ್ಯ


**ಶ್ರೀ ರಾಜಾರಾಮ್ ಕಾರಂತ್** ಬೆಂಗಳೂರು


**ಶ್ರೀ ಉಜ್ವಲ್ ಮತ್ತು ಶ್ರೀ ಪ್ರಜ್ವಲ್**
ಉಡುಪಿ


**ಶ್ರೀ ಸಂಪತ್ ರತ್ನ ರಾವ್ ಎಸ್ ಮತ್ತು ಶ್ರೀಮತಿ ಸ್ವರ್ಣಗೌರಿ,**
ಉಜಿರೆ

## ಪುಣ್ಯಸ್ಮರಣೆ


**ದಿ। ಕೃತಿ ಶರತ್ ಶೆಟ್ಟಿ,**
ಬೆದ್ರೊಟ್ಟು


**ದಿ। ಫ್ಲೋರಿನ್ ಡಿಸೋಜ**
ಉಜಿರೆ

## ನಿಮಗಿದು ತಿಳಿದಿರಲಿ

### ಬೋವಲ್ ಮ್ಯಾನೇಜ್ಮೆಂಟ್ (ಕರುಳು ನಿರ್ವಹಣೆ) ಹೇಗೆ ಮಾಡಬೇಕು?

ನಿಯಮಿತ ಸಮಯ (Routine)
ಪ್ರತಿದಿನ ಒಂದೇ ಸಮಯದಲ್ಲಿ ಮಲ ತಳ್ಳಲು ಪ್ರಯತ್ನಿಸಬೇಕು (ಸಾಮಾನ್ಯವಾಗಿ ಬೆಳಿಗ್ಗೆ ಅಥವಾ ಊಟದ ನಂತರ)
ಆಹಾರ (Diet)
ಹೆಚ್ಚು ಫೈಬರ್ ಇರುವ ಆಹಾರ:ತರಕಾರಿ, ಹಣ್ಣುಗಳು, ಗೋಧಿ ಸಾಕಷ್ಟು ನೀರು ಕುಡಿಯಬೇಕು
ಔಷಧಿ / ಸಹಾಯ (Medication & Aids)
ಸ್ಟೂಲ್ ಸಾಫ್ಟನರ್ : ಸಪ್ಪೊಸಿಟರಿ ಅಥವಾ ಎನಿಮಾ (doctor ಸಲಹೆ ಮೇರೆಗೆ)
ಡಿಜಿಟಲ್ ಸ್ಟಿಮ್ಯುಲೇಷನ್ (Digital Stimulation)
ಬೆರಳಿನಿಂದ ಮಲ ತಳ್ಳುವಿಕೆ ಉತ್ತೇಜಿಸುವ ವಿಧಾನ
ಸ್ಥಿತಿ (Position)
ಸಾಧ್ಯವಾದರೆ ಕುಳಿತ ಸ್ಥಿತಿಯಲ್ಲಿ bowel program ಮಾಡುವುದು ಉತ್ತಮ

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6,000/ -ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10,000/ -ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD
237887292400920@cnrb

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಅಪಘಾತದಿಂದ ಆತ್ಮವಿಶ್ವಾಸದ ಕಡೆಗೆ:
## ಬೆನ್ನುಹುರಿ ಅಪಘಾತಕ್ಕೊಳಗಾದ ಸಂಪತ್ ಅವರ ಯಶೋಗಾಥೆ



**ಜೀವನದಲ್ಲಿ ಒಂದು ಕ್ಷಣ ಸಾಕು ಎಲ್ಲವನ್ನೂ ಬದಲಿಸಲು... ಆದರೆ ಅದೇ ಜೀವನದಲ್ಲಿ ಮತ್ತೆ ಎದ್ದು ನಿಲ್ಲಲು ಬೇಕಾಗುವುದು ಮನಸ್ಸಿನ ಧೈರ್ಯ.**
**ಅಪಘಾತದಿಂದ ದೇಹ ದುರ್ಬಲವಾದರೂ, ಆತ್ಮವಿಶ್ವಾಸ ಇನ್ನಷ್ಟು ಬಲವಾಯಿತು.**
**ವೀಲ್ಚೇರ್‌ನಲ್ಲಿ ಕೂತರೂ ಕನಸುಗಳನ್ನು ನಿಲ್ಲಿಸದೇ, ಸವಾಲುಗಳನ್ನು ಸ್ವೀಕರಿಸಿ ಮುಂದೆ ನಡೆದವರು ಸಂಪತ್.**
**ಇದು ಕೇವಲ ಅವರ ಕಥೆಯಲ್ಲ... ಯಾವ ಸಂಕಷ್ಟ ಬಂದರೂ 'ನಾನು ಸಾಧ್ಯ' ಎಂದು ನಂಬುವ ಪ್ರತಿಯೊಬ್ಬರಿಗೂ ಸ್ಫೂರ್ತಿ."**

ಶ್ರೀ ಸಂಪತ್ ರವರು ಮೂಲತಃ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ವಡೇರಪುರ ಗ್ರಾಮದ ನಿವಾಸಿ. ಅವರು 29 ಮೇ 1989 ರಂದು ಶ್ರೀ ಸದಾಶಿವಪ್ಪ ಮತ್ತು ದಿ. ಗೌರಮ್ಮ ದಂಪತಿಯ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೇ ಸರಳತೆ ಮತ್ತು ಪರಿಶ್ರಮದ ಮೌಲ್ಯಗಳನ್ನು ಅಳವಡಿಸಿಕೊಂಡಿದ್ದರು.

ತಮ್ಮ ಪ್ರಾಥಮಿಕ ಶಿಕ್ಷಣವನ್ನು ವಡೇರಪುರದ ಸರ್ಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದ ಸಂಪತ್, ನಂತರ ಆನವೇರಿಯಲ್ಲಿ ಪ್ರೌಢಶಿಕ್ಷಣ ಮತ್ತು ಪದವಿ ಶಿಕ್ಷಣವನ್ನು ಮುಂದುವರೆಸಿದರು. ಶಿವಮೊಗ್ಗದ ಸಂಜಯ್ ಕಾಲೇಜಿನಲ್ಲಿ ಬಿ.ಎ ಪದವಿ ಪಡೆದ ಅವರು, ಜೀವನದ ಹೊಣೆಗಾರಿಕೆಯನ್ನು ಅರಿತು ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡಲು ಮುಂದಾದರು. ಮೆಡಿಕಲ್ ಏಜೆನ್ಸಿ, ಎಲೆಕ್ಟ್ರಿಕಲ್ ಕೆಲಸ ಸೇರಿದಂತೆ ಹಲವಾರು ಕೆಲಸಗಳಲ್ಲಿ ತೊಡಗಿಸಿಕೊಂಡು, ಯಾವ ಕೆಲಸವನ್ನೇ ಮಾಡಿದರೂ ಪ್ರೀತಿ ಮತ್ತು ನಿಷ್ಠೆಯಿಂದ ಮಾಡುವ ಗುಣವನ್ನು ಬೆಳೆಸಿಕೊಂಡಿದ್ದರು.

ಆದರೆ ಜೀವನ ಯಾವಾಗಲೂ ನಮ್ಮ ನಿರೀಕ್ಷೆಯಂತೆ ಸಾಗುವುದಿಲ್ಲ. ಏಪ್ರಿಲ್ 13 2023 ರಂದು ಸಂಭವಿಸಿದ ಭೀಕರ ಬೈಕ್ ಅಪಘಾತವು ಸಂಪತ್ ಅವರ ಬದುಕನ್ನು ಸಂಪೂರ್ಣವಾಗಿ ಬದಲಿಸಿತು. ಆ ಅಪಘಾತದಲ್ಲಿ ಅವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ಸೇರಿದರು. ವೈದ್ಯರು "ಇನ್ನು ಮುಂದೆ ನೀವು ನಡೆಯಲು ಸಾಧ್ಯವಿಲ್ಲ, ವೀಲ್ಚೇರ್‌ನ ಸಹಾಯದಿಂದಲೇ ಬದುಕನ್ನು ಸಾಗಿಸಬೇಕು" ಎಂಬ ಕಠಿಣ ಸತ್ಯವನ್ನು ಹೇಳಿದಾಗ, ಅದು ಅವರ ಜೀವನದ ದೊಡ್ಡ ಆಘಾತವಾಗಿತ್ತು.

ಆದರೂ ಸಂಪತ್ ಅವರು ಕುಗ್ಗಲಿಲ್ಲ ನಾಲ್ಕು ತಿಂಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ನಂತರ, ಸೆಪ್ಟೆಂಬರ್ 1, 2023ರಂದು ಡಾ. ನಾರಾಯಣ ಪಣಜಿ ಅವರ ಸಲಹೆಯಂತೆ ಸೌತಡ್ಕದಲ್ಲಿರುವ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಭೇಟಿ ನೀಡಿದರು. ಸಿಬ್ಬಂದಿಯ ಮಾರ್ಗದರ್ಶನದಲ್ಲಿ ಫಿಸಿಯೋಥೆರಪಿ ಹಾಗೂ ದಿನನಿತ್ಯದ ಚಟುವಟಿಕೆಗಳನ್ನು ಮತ್ತೆ ಕಲಿಯಲು ಆರಂಭಿಸಿದರು.

ವೀಲ್ಚೇರ್‌ನಿಂದ ಬೆಡ್‌ಗೆ ಸರಿಯುವ ತರಬೇತಿ, ದೈನಂದಿನ ಜೀವನದ ಚಟುವಟಿಕೆಗಳನ್ನು ಸ್ವತಃ ನಿರ್ವಹಿಸುವ ಕೌಶಲ್ಯ ಈ ಎಲ್ಲದರ ಮೂಲಕ ಸಂಪತ್ ಅವರು ನಿಧಾನವಾಗಿ ತಮ್ಮ ಜೀವನವನ್ನು ಮತ್ತೆ ಕಟ್ಟಿಕೊಳ್ಳಲು ಆರಂಭಿಸಿದರು. ಮೂರು ತಿಂಗಳ ಪುನಶ್ಚೇತನದ ನಂತರ, "ನಾನು ಏನನ್ನಾದರೂ ಸಾಧಿಸಬಹುದು" ಎಂಬ ಹೊಸ ಆತ್ಮವಿಶ್ವಾಸವನ್ನು ಕಂಡುಕೊಂಡರು

ಕುಟುಂಬ ಮತ್ತು ಸ್ನೇಹಿತರ ಬೆಂಬಲದೊಂದಿಗೆ, ಅವರು ಇದೀಗ ಶಿವಮೊಗ್ಗದ ಸುಬ್ಬಯ್ಯ ಆಸ್ಪತ್ರೆಯ ESI ವಿಭಾಗದಲ್ಲಿ ಕೆಲಸ ಮಾಡುತ್ತ ತಿಂಗಳಿಗೆ 15,000 ರೂಪಾಯಿ ಗಳಿಸುತ್ತಿದ್ದಾರೆ. ತಮ್ಮ ಹೋರಾಟದ ಮೂಲಕ ಅವರು ಕೇವಲ ತಮ್ಮ ಬದುಕನ್ನೇ ಬದಲಿಸಿಲ್ಲ, ಅನೇಕ ಮಂದಿಗೆ ಸ್ಫೂರ್ತಿಯ ಬೆಳಕಾಗಿದ್ದಾರೆ.

**ಶುಭಹಾರೈಸಲು ಸಂಪರ್ಕಿಸಿ : 91644 44513**